# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ , ಬಿ. ಹೆಚ್. ರಸ್ತೆ , ತುಮಕೂರು - 572 103

ಸಂಖ್ಯೆ:ತು.ವಿ.:ಅ.ವಿ.:ಸ್ಕೌಟ್ಸ್&ಗೈಡ್ಸ್:2025-26/ ೨೧೧೪

ದಿನಾಂಕ:29.12.2025

## : ಸುತ್ತೋಲೆ :

ವಿಷಯ : ದಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ "1st National Level Rover Ranger Jamboree" ಐತಿಹಾಸಿಕ ಕಾರ್ಯಕ್ರಮಕ್ಕೆ ರೋವರ್ಸ್ ಮತ್ತು ರೇಂಜರ್ಸ್ ಘಟಕದ ವಿದ್ಯಾರ್ಥಿಗಳು ಭಾಗವಹಿಸಲು ಕ್ರಮವಹಿಸುವ ಕುರಿತು.

ಉಲ್ಲೇಖ : 1. ಪಿ.ಜಿ.ಆರ್. ಸಿಂಧಿಯ, ರಾಜ್ಯ ಮುಖ್ಯ ಆಯುಕ್ತರು, ಕರ್ನಾಟಕ ಸರ್ಕಾರ ಇವರ ಪತ್ರದ ದಿನಾಂಕ:18.12.2025

2. ಮಾನ್ಯ ಕುಲಪತಿಗಳ ಅನುಮೋದನೆಯ ದಿನಾಂಕ:29.12.2025 (ಕಂಡಿಕೆ-80)

* * * * *

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಪಿ.ಜಿ.ಆರ್. ಸಿಂಧಿಯ, ರಾಜ್ಯ ಮುಖ್ಯ ಆಯುಕ್ತರು, ಕರ್ನಾಟಕ ಸರ್ಕಾರ ಇವರು ಉಲ್ಲೇಖ (1) ರ ಪತ್ರವನ್ನು ಸಲ್ಲಿಸಿ ದಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ "1st National Level Rover Ranger Jamboree" ಕಾರ್ಯಕ್ರಮವನ್ನು ದಿನಾಂಕ:09.01.2026 ರಿಂದ ದಿನಾಂಕ:13.01.2026 ರವರೆಗೆ Budhil, Balod District, Chhattisgarh State ಇಲ್ಲಿ ಆಯೋಜಿಸಲಾಗಿದ್ದು, ಸದರಿ ಐತಿಹಾಸಿಕ ಕಾರ್ಯಕ್ರಮಕ್ಕೆ ದೇಶಾದ್ಯಂತ ಸುಮಾರು 17,000 ಯುವಕರು ಭಾಗವಹಿಸಬಹುದೆಂದು ನಿರೀಕ್ಷಿಸಲಾಗಿರುತ್ತದೆ.

ಸದರಿ ಕಾರ್ಯಕ್ರಮ ನಡೆಯುವ ಸಂದರ್ಭದಲ್ಲಿ ದಿನಾಂಕ:12.01.2026 ರಂದು "ರಾಷ್ಟ್ರೀಯ ಯುವ ದಿನ" ವನ್ನು Dr. Mansukh Mandaviya, Hon'ble Minister of Labour and Employment, Youth Affairs and Sports, Government of India and Shri Vishnu Deo Sai, Hon'ble Chief Minister of Chhattisgarh ಇವರ ನೇತೃತ್ವದಲ್ಲಿ ಆಚರಿಸಲಾಗುತ್ತದೆ.

ಮುಂದುವರೆದು, ಸದರಿ ಕಾರ್ಯಕ್ರಮಕ್ಕೆ ಭಾಗವಹಿಸುವ ರೋವರ್ಸ್ ಮತ್ತು ರೇಂಜರ್ಸ್ ಘಟಕದ ವಿದ್ಯಾರ್ಥಿಗಳಿಗೆ ಉಚಿತವಾಗಿ ಸಂಸ್ಥೆಯಿಂದಲೇ ವಸತಿ ಮತ್ತು ಊಟದ ವ್ಯವಸ್ಥೆಯನ್ನು ಒದಗಿಸಲಾಗುವುದೆಂದು ತಿಳಿಸಿ, ಪ್ರಯಾಣ ವೆಚ್ಚವನ್ನು ಕಾಲೇಜುಗಳಲ್ಲಿನ ರೋವರ್ಸ್ ಮತ್ತು ರೇಂಜರ್ಸ್ ಘಟಕದ ನಿಧಿಯಿಂದ ಭರಿಸುವಂತೆ ಮತ್ತು ಭಾಗವಹಿಸುವ ಪ್ರತಿ ವಿದ್ಯಾರ್ಥಿಯು ನೋಂದಣಿ ಶುಲ್ಕ ರೂ. 250-00 (ಎರಡು ನೂರ ಐವತ್ತು ರೂಪಾಯಿಗಳು ಮಾತ್ರ) ಗಳನ್ನು ಪಾವತಿಸಬೇಕಾಗುತ್ತದೆ ಎಂಬುದಾಗಿ ತಿಳಿಸಿ ತಮ್ಮ ವಿಶ್ವವಿದ್ಯಾನಿಲಯದ ಅಧೀನದಲ್ಲಿನ ಕಾಲೇಜುಗಳಿಂದ ರೋವರ್ಸ್ ಮತ್ತು ರೇಂಜರ್ ಘಟಕದ ವಿದ್ಯಾರ್ಥಿಗಳನ್ನು ಸದರಿ ಕಾರ್ಯಕ್ರಮಕ್ಕೆ ನಿಯೋಜಿಸುವಂತೆ ಕೋರಿರುತ್ತಾರೆ.

ತತ್ಸಂಬಂಧ ಉಲ್ಲೇಖ (1) ರ ಪತ್ರವನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿ ತಮಗೆ ಕಳುಹಿಸುತ್ತಾ ಉಲ್ಲೇಖ (2) ರ ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ ತುಮಕೂರು ವಿಶ್ವವಿದ್ಯಾನಿಲಯದಡಿ ಬರುವ ಘಟಕ/ಎಲ್ಲಾ ಸಂಯೋಜಿತ ಪದವಿ ಕಾಲೇಜು(ಸ್ನಾತಕ/ಸ್ನಾತಕ ಶಿಕ್ಷಣ/ಸ್ನಾತಕೋತ್ತರ) ಮತ್ತು ಸ್ನಾತಕೋತ್ತರ ವಿಭಾಗಗಳಲ್ಲಿನ ರೋವರ್ಸ್ ಮತ್ತು ರೇಂಜರ್ಸ್ ಘಟಕದ ವಿದ್ಯಾರ್ಥಿಗಳು ಸೂಚಿತ ಐತಿಹಾಸಿಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಅಗತ್ಯ ಕ್ರಮವಹಿಸುವಂತೆ ಈ ಮೂಲಕ ತಮಗೆ ತಿಳಿಸಲಾಗಿದೆ.

ಆದೇಶದ ಮೇರೆಗೆ

ಉಪಕುಲಸಚಿವರು

ಉಪಕುಲಸಚಿವರು
ಅಭಿವೃದ್ಧಿ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಕರಡು ಪ್ರತಿ ಮಾನ್ಯ ಕುಲಸಚಿವರಿಂದ ಅನುಮೋದಿಸಲ್ಪಟ್ಟಿದೆ.

ಗೆ,

1. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು.
2. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು.
3. ಅಧ್ಯಕ್ಷರು/ಸಂಯೋಜಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಸಂಯೋಜಕರು, ಜ್ಞಾನಸಿರಿ ಕ್ಯಾಂಪಸ್, ಬಿದರೆಕಟ್ಟೆ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಸಂಯೋಜಕರು, ತಿಪಟೂರು ಸ್ನಾತಕೋತ್ತರ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತಿಪಟೂರು.
6. ಸಂಯೋಜಕರು, ಶಿರಾ ಸ್ನಾತಕೋತ್ತರ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ಭುವನಹಳ್ಳಿ, ಶಿರಾ.
7. ಪ್ರಾಂಶುಪಾಲರು, ಎಲ್ಲಾ ಸಂಯೋಜಿತ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
8. ಪ್ರಾಂಶುಪಾಲರು, ಎಲ್ಲಾ ಸ್ನಾತಕ ಶಿಕ್ಷಣ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

**ಪ್ರತಿಗಳು :**

1. ಜಿಲ್ಲಾ ಕಾರ್ಯದರ್ಶಿಗಳು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ, ಕಂಠೀರವ ಸ್ಕೌಟ್ಸ್ ಗೈಡ್ಸ್ ಭವನ, ಗಾಂಧಿನಗರ, ತುಮಕೂರು – 572102.
2. ಸಂಯೋಜಕರು, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಘಟಕ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಮುಖ್ಯಸ್ಥರು, ವಿಶ್ವವಿದ್ಯಾನಿಲಯ ಹಾಗೂ ಘಟಕ ಕಾಲೇಜುಗಳ ರೋವರ್ಸ್ ಮತ್ತು ರೇಂಜರ್ಸ್ ಘಟಕ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
6. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು :– **ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಭಿತ್ತರಿಸುವಂತೆ ಹಾಗೂ ಘಟಕ/ಸಂಯೋಜಿತ ಪದವಿ ಕಾಲೇಜು/ಸ್ನಾತಕ ಶಿಕ್ಷಣ ಪದವಿ ಕಾಲೇಜು/ಸ್ನಾತಕೋತ್ತರ ವಿಭಾಗಗಳಿಗೆ ಸಂದೇಶವನ್ನು ಕಳುಹಿಸುವಂತೆ ಸೂಚಿಸಿದೆ.**
7. ಕಚೇರಿ ಪ್ರತಿ.

**P.G.R. SINDHIA, B.E. (Civil)**
**STATE CHIEF COMMISSIONER**
**Former Minister for Health, Finance, Home, Industries & Transport**
**Government of Karnataka**

**State Headquarters**
**No. 39, "Shanthigruha"**
**Palace Road**
**Bengaluru-560 001**

# ದಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

## THE BHARAT SCOUTS & GUIDES, KARNATAKA

**Ref: BSG/SHQ/** 1867/2025-26

**Date:** 18/12/2025

Dear Sir,

I am happy to inform you that the 1st **National Level Rover Ranger Jamboree** of **The Bharat Scouts and Guides** will be held at **Budhil, Balod District, Chhattisgarh State**, from **9th to 13th January 2026**. Over **17,000 youths** from across the country are expected to participate in this historic event.

During the Jamboree, **National Youth Day** will be celebrated on **12th January 2026**, under the leadership of **Dr. Mansukh Mandaviya**, Hon'ble **Minister of Labour and Employment, Youth Affairs and Sports**, Government of India and **Shri Vishnu Deo Sai**, Hon'ble **Chief Minister of Chhattisgarh.**

**Accommodation and food** for all participants will be provided by our organization **free of cost. Travel expenditure** may be met from the **Rover-Ranger Fund of the respective colleges.** Each participant is required to pay a **registration fee of Rs.250/-.** A copy of the **circular is enclosed herewith** for your kind reference.

I kindly request you to **permit the deputation of Rovers and Rangers from all colleges under your University** to participate in this prestigious National level event and oblige.

**Thanking You with Scouts-Guides Greetings**

Yours Sincerely

( P.G.R.SINDHIA)
State Chief Commissioner

The Registrar
Tumkur University
Tumkur – 572101

20/12/25

4386
20/12/25

Ph. (Off) : 080-22343400, 22267470
Res.: 080-26582711, 26586725
info@bsgkarnataka.org
www.bsgkarnataka.org
Mob : 09845371958
pgrsindhia@gmail.com